## ಕುಚ್ಚಿಗೆ ಅಕ್ಕಿಗಾಗಿ ಕದಕೆ

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಭತ್ತದ ಕೊಯ್ಲಿನ ನಂತರ ಭತ್ತವನ್ನು ಬಿದಿರನ ದೊಡ್ಡ ಕುಕ್ಕೆಯಲ್ಲಿ ರಾಶಿ ಹಾಕಿ ಅದನ್ನು ಹುಲ್ಲಿನ ಹಗ್ಗದಿಂದ ಸುತ್ತು ಹಾಕಲಾಗುತ್ತದೆ. ಮೇಲೆ ಹುಲ್ಲಿನ ಮಾಡು ಮಾಡಿ ಪುಟ್ಟ ಗುಡಿಸಲಿನಂತೆ ಕಟ್ಟಿ ಭತ್ತವನ್ನು ಭದ್ರವಾಗಿ ಸಂಗ್ರಹಿಸಿಡಲಾಗುತ್ತದೆ. ಇದನ್ನು ಕದಕೆ ಅಥವಾ ಹಾತ್ತರ ಎನ್ನುವರು. ನಾಲ್ಕು ತಿಂಗಳು ಸಂಗ್ರಹಿಸಿ ಇಡುವ ಭತ್ತವನ್ನು ಖೆಡ್ಡಸದ ಸಂದರ್ಭದಲ್ಲಿ ಬೇಯಿಸಿ ಬಿಸಿಲಿಗೆ ಹಾಕಿ ಅಕ್ಕಿ ಮಾಡಿ ಮುಡಿಗಳಲ್ಲಿ ಸಂಗ್ರಹಿಸಿಡಲಾಗುತ್ತದೆ. ಉಡುಪಿಯ ಪರ್ಯಾಯದ ಹೊರೆ ಕಾಣಿಕೆಯ ಅಂಗಳದಲ್ಲಿ ಪ್ರದರ್ಶನಕ್ಕಿಟ್ಟಿದ್ದ ಕದಕೆ ಮತ್ತು ಮುಡಿಗಳು ಜನರನ್ನು ಆಕರ್ಷಿಸಿದವು.

**-ಶಿಲ್ಪಾ ಕೆ., ಉಡುಪಿ**





## ನೇಪಾಳದ ನಾಣ್ಯ

ನೆರೆಯ ದೇಶ ನೇಪಾಳದಲ್ಲಿ ಚಲಾವಣೆಯಲ್ಲಿರುವ ನಾಣ್ಯದ ಎರಡು ಮುಖಗಳಿವು. ಒಂದರಲ್ಲಿ ಸಂಸ್ಕೃತ ಶ್ರೀ, ನಂತರ ಚೌಕದಲ್ಲಿ ಸೂರ್ಯ ಚಂದ್ರರು. ಪಕ್ಕದಲ್ಲಿ ವಿಷ್ಣುವಿನ ಲಾಂಛನವಾದ ಚಕ್ರ, ಶಂಖ, ಪದ್ಮ ಗಧಾ ಚಿಹ್ನೆಗಳು ಮಧ್ಯದಲ್ಲಿ ತ್ರಿಶೂಲಗಳಿವೆ. ರಾಜನ ಹೆಸರಿದೆ. ಭಾರತೀಯ ಶಾಸ್ತ್ರದ ಬಂಧನದಲ್ಲಿ ಎಲ್ಲವನ್ನೂ ಅಂದವಾಗಿ ಬಂಧಿಸಿದಂತಿದೆ.

ನಾಣ್ಯದ ಎರಡನೆ ಮುಖದಲ್ಲಿ ಜಾನಕಿ ಮಂದಿರದ ಚಿತ್ರವಿದೆ. ಕೆಲವು ನಾಣ್ಯದಲ್ಲಿ ಪಶುಪತಿನಾಥನ ಮಂದಿರದ ಚಿತ್ರವಿದೆ.

**-ಜೆ. ರಾಜನ್, ತುಮಕೂರು**

## ಬೆತ್ತದ ಪೆಟ್ಟಿಗೆ

ಮಲೆನಾಡಿನ ಗ್ರಾಮೀಣ ಭಾಗದಲ್ಲಿ ಹಿಂದಿನ ಕಾಲದಲ್ಲಿ ಕಪಾಟಿನಂತೆ ಉಪಯೋಗವಾಗುತ್ತಿದ್ದ ಈ ಪರಿಕರ ಬೆತ್ತದ ಬುಟ್ಟಿ. ಬಟ್ಟೆ– ಬರೆ ಮುಂತಾದ ವಸ್ತುಗಳನ್ನು ಹಾಕಲು ಅನಾದಿ ಕಾಲದಿಂದಲೂ ಇದನ್ನು ಬಳಸುತ್ತಿದ್ದರು. ಈ ಕಾಲಮಾನದಲ್ಲಿ ಕಪಾಟಿನ ಬಳಕೆಯಿಂದಾಗಿ ಈ ಅಪರೂಪದ ವಸ್ತು ನೇಪಥ್ಯಕ್ಕೆ ಸರಿಯುತ್ತಿದೆ. ನೂರಾರು ವರ್ಷ ತಾಳಿಕೆ–ಬಾಳಿಕೆ ಬರುವ ಬೆತ್ತದ ಪೆಟ್ಟಿಗೆಯನ್ನು ಈಗಲೂ ಭಾಗನಹಳ್ಳಿಯ ಕೃಷ್ಣಪ್ಪನವರು ಬಳಸುತ್ತಿರುವುದು ನೋಡಿ ಸಂತಸವಾಯಿತು.

ಚಿತ್ರ- ಬರಹ:

**ಎಚ್. ನಾಗರಾಜ್ ನಾಯ್ಕ್, ತೀರ್ಥಹಳ್ಳಿ**

